## “ಮುಸ್ಲಿಮರು ಅಲ್ಲಾಹು ಎಂಬ ಹೊಸ ದೇವರನ್ನು ಆರಾಧಿಸುತ್ತಾರೆ”

ತಪ್ಪುಕಲ್ಪನೆ # 3

ಮುಸ್ಲಿಮರು ಯಹೂದ ಕ್ರೈಸ್ತರದ್ದಲ್ಲದ ಬೇರೆಯೇ ದೇವರನ್ನು ಆರಾಧಿಸುತ್ತಾರೆ ಎಂದು ಅನೇಕ ಮುಸ್ಲಿಮೇತರರು ತಪ್ಪಾಗಿ ನಂಬುತ್ತಿದ್ದಾರೆ. ಮುಸ್ಲಿಮರು ದೇವರನ್ನು ಅಲ್ಲಾಹು ಎಂದು ಕರೆಯುವ ಕಾರಣದಿಂದ ಇದು ಉದ್ಭವಿಸಿರಬಹುದು. ಆದರೆ ವಾಸ್ತವವಾಗಿ, ಮುಸ್ಲಿಮರು ಆರಾಧಿಸುತ್ತಿರುವುದು ನೋಹ್, ಅಬ್ರಹಾಮ್, ಮೋಶೆ ಮತ್ತು ಯೇಸು ಆರಾಧಿಸಿದ ಅದೇ ದೇವರನ್ನು. ಅಲ್ಲಾಹು ಎಂಬುದು ಸರ್ವಶಕ್ತ ದೇವನಿಗಿರುವ ಅರಬಿ ಹೆಸರು. ಅರಬಿ ಮಾತನಾಡುವ ಕ್ರೈಸ್ತರು ಮತ್ತು ಯಹೂದರು ದೇವನನ್ನು ಅಲ್ಲಾಹು ಎಂದೇ ಸಂಬೋಧಿಸುತ್ತಾರೆ. ನೀವು ಅರಬಿ ಬೈಬಲನ್ನು ಎತ್ತಿಕೊಂಡರೆ ಅದರಲ್ಲಿ ದೇವರು ಎಂಬ ಸ್ಥಳದಲ್ಲಿ ಅಲ್ಲಾಹು ಎಂಬ ಪದವನ್ನು ಬಳಸಿರುವುದನ್ನು ಕಾಣಬಹುದು.

ವಾಸ್ತವದಲ್ಲಿ, ಮುಸ್ಲಿಮರು, ಕ್ರೈಸ್ತರು ಮತ್ತು ಯಹೂದಿಗಳು ಅದೇ ದೇವನಲ್ಲಿ (ಸೃಷ್ಟಿಕರ್ತನಲ್ಲಿ) ವಿಶ್ವಾಸವಿಡುತ್ತಾರಾದರೂ ಅವರ ದೇವಪರಿಕಲ್ಪನೆಗಳು ಗಮನಾರ್ಹವಾದ ಅಂತರಗಳನ್ನು ಹೊಂದಿವೆ. ಉದಾಹರಣೆಗೆ, ದೇವನಿಗೆ ಸಹಭಾಗಿಗಳಿದ್ದಾರೆ ಅಥವಾ ಅವನು ತ್ರಿಯೇಕತ್ವದ ಒಂದು ಭಾಗವಾಗಿದ್ದಾನೆ ಎಂಬ ಪರಿಕಲ್ಪನೆಯನ್ನು ಮುಸ್ಲಿಮರು ತಿರಸ್ಕರಿಸುತ್ತಾರೆ. ಮುಸ್ಲಿಮರು ಸರ್ವಶಕ್ತನಾದ ಅನ್ಯೂನನಾದ ದೇವನನ್ನು ಮಾತ್ರ ಆರಾಧಿಸುತ್ತಾರೆ.

## “ಇಸ್ಲಾಮ್ ಉಗ್ರವಾದಕ್ಕೆ ಅನುಮತಿ ನೀಡುತ್ತದೆ”

ತಪ್ಪುಕಲ್ಪನೆ # 4

ಇದು ಬಹುಶಃ ಇಸ್ಲಾಮಿನ ಬಗ್ಗೆಯಿರುವ ಬಹುದೊಡ್ಡ ತಪ್ಪುಕಲ್ಪನೆ. ವಿಶೇಷವಾಗಿ ಇದು ಮಾಧ್ಯಮಗಳು ನೀಡುವ ಪೂರ್ವಗ್ರಹಪೀಡಿತ ಚಿತ್ರಣ. ಮುಸ್ಲಿಮರು ನ್ಯಾಯಬದ್ಧವಾಗಿ ಹೋರಾಡುತ್ತಿದ್ದಾರೋ ಅಥವಾ ನ್ಯಾಯವಿರುದ್ಧವಾಗಿ ಹೋರಾಡುತ್ತಿದ್ದಾರೋ, ಮುಸ್ಲಿಮರು ಇತರರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೋ ಅಥವಾ ಸ್ವತಃ ದಬ್ಬಾಳಿಕೆಗೆ ಒಳಗಾಗಿದ್ದಾರೋ ಮುಂತಾದ ಯಾವುದನ್ನೂ ಪರಿಶೀಲಿಸದೆ ಮಾಧ್ಯಮಗಳು, ಹೋರಾಟ ಮಾಡುವ ಪ್ರತಿಯೊಬ್ಬ ಮುಸಲ್ಮಾನನನ್ನೂ ಉಗ್ರವಾದಿಯೆಂದು ಚಿತ್ರೀಕರಿಸುತ್ತದೆ. ಆದ್ದರಿಂದ ನಮ್ಮ ಮನಸ್ಸಿನಲ್ಲಿ ಉದ್ಭವಿಸುವ ಪ್ರಶ್ನೆಯೇನೆಂದರೆ: ಇಸ್ಲಾಮ್ ಉಗ್ರವಾದವನ್ನು ಪ್ರೋತ್ಸಾಹಿಸು ತ್ತದೆಯೇ? ಖಂಡಿತವಾಗಿಯೂ ಇಲ್ಲ! ಅಮಾಯಕ ನಾಗರಿಕರನ್ನು ಗುರಿ ಮಾಡುವ ಉಗ್ರರ ಎಲ್ಲ ಪ್ರಮಾದಪೂರಿತ ಕೃತ್ಯಗಳನ್ನೂ ಇಸ್ಲಾಮ್ ಸಂಪೂರ್ಣವಾಗಿ ಖಂಡಿಸುತ್ತದೆ ಮತ್ತು ವಿರೋಧಿಸುತ್ತದೆ.

ಅದೇ ಸಮಯ, ದಬ್ಬಾಳಿಕೆ, ಅನ್ಯಾಯ ಮತ್ತು ಅವಹೇಳನ ವುಂಟಾಗುವಾಗ ಇಸ್ಲಾಮ್ ಮೌನವಾಗಿರಲು ಆದೇಶಿಸುವುದಿಲ್ಲ. ಹೀಗೆ ಮೌನವಾದರೆ ಯಾವುದೇ ಧರ್ಮವೂ, ನಾಗರಿಕತೆಯೂ ಬದುಕುಳಿಯಲಾರದು ---ಆದರೆ ನಿರಾಯುಧರಾದ ಪುರುಷರು, ಮಹಿಳೆಯರು ಮತ್ತು ಮಕ್ಕಳ ಮೇಲೆ ಆಕ್ರಮಣ ಮಾಡುವುದಕ್ಕೆ ಇಸ್ಲಾಮ್ ಖಂಡಿತವಾಗಿಯೂ ಅನುಮತಿ ನೀಡುವುದಿಲ್ಲ.

> “ನಿಮಗೆದುರಾಗಿ ಹೋರಾಡುವವರ ವಿರುದ್ಧ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ, ಆದರೆ ಹದ್ದು ಮೀರದಿರಿ. ಖಂಡಿತವಾಗಿಯೂ ಹದ್ದುಮೀರುವವರನ್ನು ಅಲ್ಲಾಹು ಮೆಚ್ಚಲಾರನು.” (ಕುರ್‌ಆನ್ 2:190)

ಯುದ್ಧದ ಸಂದರ್ಭಗಳಲ್ಲೂ ಕೂಡ, ಇಸ್ಲಾಮ್ ಕಟ್ಟುನಿಟ್ಟಾದ ನಿಯಮಗಳನ್ನಿಟ್ಟಿದೆ. ಉದಾಹರಣೆಗೆ, ಮುಸ್ಲಿಮರೊಂದಿಗೆ ಶಾಂತಿ ಒಪ್ಪಂದದಲ್ಲಿರುವವರನ್ನು ಕೊಲ್ಲಲು ಅಥವಾ ಅವರಿಗೆ ಹಾನಿ ಮಾಡಲು ಇಸ್ಲಾಮ್ ಅನುಮತಿ ನೀಡುವುದಿಲ್ಲ. ಹಾಗೆಯೇ ಯುದ್ಧದಲ್ಲಿ ಭಾಗಿಯಾಗದವರನ್ನು, ಮಹಿಳೆಯರನ್ನು, ಅಪ್ರಾಪ್ತರನ್ನು, ಸೇವಕರನ್ನು, ಕುರುಡರನ್ನು, ಸನ್ಯಾಸಿಗಳನ್ನು, ವೃದ್ಧರನ್ನು, ಹೋರಾಡುವ ಶಕ್ತಿಯಿಲ್ಲದವರನ್ನು, ಬುದ್ಧಿಭ್ರಮಣೆ ಹೊಂದಿದವರನ್ನು ಕೊಲ್ಲಲು ಅಥವಾ ಅವರಿಗೆ ಹಾನಿ ಮಾಡಲು ಇಸ್ಲಾಮ್ ಅನುಮತಿ ನೀಡುವುದಿಲ್ಲ. ವಾಸ್ತವವಾಗಿ, ಯುದ್ಧದ ಸಮಯದಲ್ಲಿ ಬೆಳೆಗಳನ್ನು ಮತ್ತು ಕೃಷಿಗಳನ್ನು ಹಾನಿ ಮಾಡುವ ಅನುಮತಿ ಕೂಡ ಮುಸ್ಲಿಮರಿಗಿಲ್ಲ! ಇವು ಇಂದಿನ ಯಾವುದೇ ಸೇನಾ ಶಿಬಿರಗಳಲ್ಲೂ ಕೇಳಿಬರದಂತಹ ಉದಾತ್ತ ಬೋಧನೆಗಳು.

ಒಬ್ಬ ಅಮಾಯಕ ವ್ಯಕ್ತಿಯನ್ನು ಕೊಲ್ಲುವುದರ ಗಂಭೀರತೆಯನ್ನು ಕುರ್‌ಆನ್ ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ ಮತ್ತು ಮನುಷ್ಯ ಜೀವದ ಮೌಲ್ಯವನ್ನು ಎತ್ತಿಹಿಡಿಯುತ್ತದೆ. ಅದೇ ಸಮಯ ಅನ್ಯ ಧರ್ಮೀಯರೊಂದಿಗೆ ಸೌಮ್ಯವಾಗಿ ವರ್ತಿಸಬೇಕೆಂದೂ ಇಸ್ಲಾಮ್ ಬೋಧಿಸುತ್ತದೆ.

> “ಯಾರಾದರೂ ಒಬ್ಬ (ಅಮಾಯಕ) ವ್ಯಕ್ತಿಯನ್ನು ಕೊಂದರೆ ಅವನು ಸಂಪೂರ್ಣ ಮನುಕುಲವನ್ನೇ ಕೊಂದವನಂತಾಗುವನು. ಮತ್ತು ಯಾರಾದರೂ ಒಬ್ಬ ವ್ಯಕ್ತಿಯ ಜೀವವುಳಿಸಿದರೆ ಅವನು ಸಂಪೂರ್ಣ ಮನುಕುಲದ ಜೀವವುಳಿಸಿದವನಂತಾಗುವನು.” (ಕುರ್‌ಆನ್ 5:32)

> “ಧರ್ಮದ ವಿಷಯದಲ್ಲಿ ನಿಮ್ಮೊಂದಿಗೆ ಯುದ್ಧ ಮಾಡದವರು ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಗಟ್ಟದವರು ಯಾರೋ ಅವರಿಗೆ ನೀವು ಒಳಿತು ಮಾಡುವುದನ್ನು ಮತ್ತು ಅವರೊಂದಿಗೆ ನ್ಯಾಯಪಾಲಿಸುವುದನ್ನು ಅಲ್ಲಾಹು ನಿಮಗೆ ವಿರೋಧಿಸಲಾರನು.” (ಕುರ್‌ಆನ್ 60:8)

ಈ ಮೇಲಿನ ಕುರ್‌ಆನ್ ಸೂಕ್ತಿಗಳನ್ನು ಓದಿದ ಬಳಿಕವೂ ಉಗ್ರವಾದಿಗಳ ಕೃತ್ಯಗಳಿಗೆ ಇಸ್ಲಾಮನ್ನು ದೂಷಿಸಲು ಸಾಧ್ಯವೇ?

## ಸಮಾಪ್ತಿ

ಆದ್ದರಿಂದ ಇಸ್ಲಾಮನ್ನು ಜನರ ಸಹಜ ಭಾವನೆಗಳಿಗೆ ಮತ್ತು ಮೌಲ್ಯಗಳಿಗೆ ಅಪರಿಚಿತವೂ ಅರೋಚಕವೂ ಆಗಿರುವ ರೀತಿಯಲ್ಲಿ ಚಿತ್ರೀಕರಿಸುವ ಅನೇಕ ಶ್ರಮಗಳು ನಡೆದಿವೆ. ಇಸ್ಲಾಮಿನ ಬಗ್ಗೆ ಒಂದು ನಿರ್ಧಾರವನ್ನು ತಳೆಯುವ ಮುನ್ನ ಇವುಗಳನ್ನು ಜ್ಞಾಪಿಸಿಕೊಳ್ಳಿ:

- ಇಂತಹ ತಪ್ಪುಕಲ್ಪನೆಗಳನ್ನು ಮತ್ತು ಅಸತ್ಯಗಳನ್ನು ಚಿರವಾಗಿ ಉಳಿಯುವಂತೆ ಮಾಡುವ ಮೂಲಕ ಲಾಭ ಪಡೆಯುವವರು ಯಾರು?
- ನೀವು ಸ್ವತಃ ಇಸ್ಲಾಮಿನ ಬಗ್ಗೆ ಅಧ್ಯಯನ ಮಾಡಿದ್ದೀರಾ? ಅಥವಾ ಇತರರಿಂದ ಮತ್ತು ಮಾಧ್ಯಮಗಳಿಂದ ಕೇಳಿದ್ದನ್ನೇ ನಿಜವೆಂದು ನಂಬಿದ್ದೀರಾ?
- ಇಸ್ಲಾಮ್ ಎಂಬುದು ಒಂದು ಕಠೋರ ಮತ್ತು ಅಮಾನವೀಯ ಜೀವನಪದ್ಧತಿ ಯಾಗಿದ್ದರೆ ಜಗತ್ತಿನಾದ್ಯಂತ ಕೋಟ್ಯಂತರ ಜನರು ಯಾಕೆ ಇಸ್ಲಾಮಿಗೆ ಮತಾಂತರ ಗೊಳ್ಳುತ್ತಿದ್ದಾರೆ?

For more information on Islam, please visit
www.islamhouse.com

# ಇಸ್ಲಾಮ್‌ನ ಬಗ್ಗೆ ತಪ್ಪು ಕಲ್ಪನೆಗಳು

## ನಿಜವಾಗಿ ನಿಮಗೇನು ಗೊತ್ತು?

Publishers
IslamHouse.com

# ಪೀಠಿಕೆ

ಒಬ್ಬ ಕ್ರೈಸ್ತ ಸನ್ಯಾಸಿನಿ ತಲೆಯಿಂದ ಪಾದದ ತನಕ ಮರೆಮಾಚಿದ ಕಾರಣ ಮತ್ತು ದೇವರಿಗೆ ಸ್ವಯಂ ಅರ್ಪಿಸಿಕೊಂಡ ಕಾರಣ ಆಕೆಯನ್ನು ಗೌರವಿಸಲಾಗುತ್ತದೆ, ಆದರೆ ಒಬ್ಬ ಮುಸ್ಲಿಮ್ ಹೆಣ್ಣು ಇದೇ ರೀತಿ ಮರೆಮಾಚಿದರೆ ಆಕೆಯನ್ನು 'ದಬ್ಬಾಳಿಕೆಗೊಳಗಾದವಳು' ಎಂಬಂತೆ ವೀಕ್ಷಿಸಲಾಗುತ್ತದೆ. ಅಥವಾ ಒಬ್ಬ ಯಹೂದ ತನ್ನ ಧರ್ಮನಿಯಮದಂತೆ ಗಡ್ಡ ಬೆಳೆಸಬಹುದು, ಆದರೆ ಒಬ್ಬ ಮುಸ್ಲಿಮ್ ಗಡ್ಡ ಬೆಳೆಸಿದರೆ ಅವನನ್ನು 'ಉಗ್ರವಾದಿ' ಎಂಬಂತೆ ಚಿತ್ರಿಸಲಾಗುತ್ತದೆ. ಇವೆಲ್ಲವೂ ಯಾಕೆಂದು ನೀವೆಂದಾದರೂ ಅಚ್ಚರಿ ಪಟ್ಟಿರುವಿರಾ?

ಪಾಶ್ಚಾತ್ಯರಿಗೆ ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಅನೇಕ ತಪ್ಪುಕಲ್ಪನೆಗಳಿವೆ. ಪಾಶ್ಚಾತ್ಯ ಜಗತ್ತು ಅತ್ಯಂತ ಮುಂದುವರಿದ, ಪ್ರಬುದ್ಧ ಮತ್ತು ಸ್ವತಂತ್ರ ಜಗತ್ತಾಗಿದೆ ಮತ್ತು ಇಸ್ಲಾಮ್ ಅದಕ್ಕೆ ತದ್ವಿರುದ್ಧವಾಗಿ ಪ್ರಾಚೀನ, ಅಜ್ಞಾನಪೂರಿತ ಮತ್ತು ದಬ್ಬಾಳಿಕೆಯ ಧರ್ಮವಾಗಿದೆಯೆಂದು ಹೆಚ್ಚಿನವರು ನಂಬುತ್ತಾರೆ. ಈ ನಂಬಿಕೆಗಿರುವ ಒಂದು ಕಾರಣವು ಮಾಧ್ಯಮಗಳು. ಅವು ಮುಸ್ಲಿಮರನ್ನು ಇಸ್ಲಾಮೀ ಬೋಧನೆಗಳಿಗೆ ವಿರುದ್ಧವಾಗಿರುವ ರೀತಿಯಲ್ಲಿ ಚಿತ್ರಿಸುತ್ತವೆ. ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಅರ್ಥಮಾಡಿಕೊಳ್ಳಲಿರುವ ಪ್ರಮುಖ ಮಾರ್ಗವು ಪೂರ್ವಾಗ್ರಹಗಳನ್ನು ಬದಿಗಿಟ್ಟು ಪ್ರತಿಯೊಂದು ಸನ್ನಿವೇಶವನ್ನೂ ಇಸ್ಲಾಮೀ ಬೋಧನೆಗಳ ಆಧಾರದಲ್ಲಿ –ಮುಸ್ಲಿಮರ ಪ್ರವೃತ್ತಿಗಳ ಆಧಾರದಲ್ಲಲ್ಲ– ಪರೀಕ್ಷಿಸುವುದು. ಆದ್ದರಿಂದಲೇ, ಕೆಲವು ಸಾಮಾನ್ಯ ತಪ್ಪುಕಲ್ಪನೆಗಳನ್ನು ನಿವಾರಿಸಿ ಕೊಡುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸಿದ್ದೇವೆ.

## "ಹಿಜಾಬ್ ದಬ್ಬಾಳಿಕೆಯಾಗಿದೆ"

ತಪ್ಪುಕಲ್ಪನೆ # 1

ಹಾಗಾದರೆ ನಿಖರವಾಗಿ ಹಿಜಾಬ್ ಎಂದರೇನು? ಹಿಜಾಬ್ ಪಾಲಿಸುವುದು ಎಂದರೆ, ಮುಸ್ಲಿಮ್ ಮಹಿಳೆಯರು ತಮ್ಮ ದೇಹವನ್ನು ಸಭ್ಯ ಉಡುಪಿನಿಂದ, ಅಂದರೆ ಅವರ ದೇಹದ ಆಕಾರವು ಅನ್ಯ ಪುರುಷರಿಗೆ ಗೋಚರವಾಗದಂತಹ ಉಡುಪಿನಿಂದ ಮರೆಮಾಚುವುದು. ವಾಸ್ತವವಾಗಿ, ಹಿಜಾಬ್ ಎಂಬುದು ಬಾಹ್ಯ ರೂಪಕ್ಕೆ ಮಾತ್ರ ಅನ್ವಯವಲ್ಲ; ಅದು ಸಭ್ಯವಾದ ಮಾತು, ಗೌರವ ಮತ್ತು ಸದಾಚಾರದಿಂದ ಕೂಡಿದ ವರ್ತನೆ ಮತ್ತು ಸುಶೀಲತೆಯನ್ನೂ ಒಳಗೊಂಡಿದೆ. ಈ ಸ್ವಭಾವಗಳು ಪುರುಷರಲ್ಲೂ ಇರಬೇಕಾಗಿದೆಯೆಂಬುದನ್ನು ಬೇರೆಯೇ ಹೇಳಬೇಕಾಗಿಲ್ಲ.

ಒಬ್ಬ ಮುಸ್ಲಿಮ್ ಮಹಿಳೆ ಆಕೆಯ ದೃಷ್ಟಿಕೋನವನ್ನು ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವುದು, ಆಸ್ತಿ ಹೊಂದುವುದು, ವಿದ್ಯಾಭ್ಯಾಸ ಮತ್ತು ಉದ್ಯೋಗವನ್ನು ಪಡೆಯುವುದು, ಒಬ್ಬ ಪತಿಯನ್ನು ಆರಿಸುವುದು, ಮೊದಲಾದ ಸ್ವಾತಂತ್ರ್ಯಗಳಿಗೆ ಹಿಜಾಬ್ ನಿರ್ಬಂಧ ಹೇರುವುದಿಲ್ಲ. ಹಿಜಾಬ್ ಎಂಬುದು ಗೌರವ ಮತ್ತು ಘನತೆಯ ಪ್ರತೀಕವೂ, ಅಧಿಕೃತತೆಯೂ, ಮಹಿಳೆಯ ಆಕೆಯ ಬಾಹ್ಯ ಪ್ರಕಟ ರೂಪಕ್ಕಿಂತಲೂ ಆಕೆಯ ಆಂತರಿಕ ಆಧ್ಯಾತ್ಮಿಕ ಸೌಂದರ್ಯದ ಮೂಲಕ ತೀರ್ಮಾನಿಸಲ್ಪಡತ್ತಾಳೆಂಬುದಕ್ಕಿರುವ ಖಾತರಿಯೂ ಆಗಿದೆ. ಹಿಜಾಬ್ ಮಹಿಳೆಯನ್ನು ವಿಮೋಚನೆಗೊಳಿಸಿ ಆಕೆಯ ಪದವಿಯನ್ನು ಉನ್ನತೀಕರಿಸುತ್ತದೆ ಮತ್ತು ಆಕೆಯ ಯೋಗ್ಯತೆಯನ್ನು ನಿರ್ಣಯಿಸಬೇಕಾದುದು ಆಕೆಯ ಲೈಂಗಿಕತೆಯ ಆಧಾರದಲ್ಲಲ್ಲ ಬದಲಾಗಿ ಆಕೆಯ ಬುದ್ಧಿಶಕ್ತಿಯ ಆಧಾರದಲ್ಲಾಗಿದೆಯೆಂಬುದನ್ನು ಬೇಡುತ್ತದೆ.

ಮುಸ್ಲಿಮ್ ಮಹಿಳೆಯರು ಹಿಜಾಬನ್ನು ಪಾಲಿಸುವುದಕ್ಕಿರುವ ಒಂದು ಕಾರಣವು ಅಲ್ಲಾಹು ಅದನ್ನು ಅವರಿಗೆ ಕಡ್ಡಾಯ ಆರಾಧನಾ ಕರ್ಮವನ್ನಾಗಿ ಮಾಡಿರುವುದರಿಂದಾಗಿದೆ. ತನ್ನ ಸೃಷ್ಟಿಗಳಿಗೆ ಯಾವುದು ಅತ್ಯುತ್ತಮ ಎಂಬುದನ್ನು ಅಲ್ಲಾಹು ಚೆನ್ನಾಗಿ ಅರಿತಿದ್ದಾನೆ.

> "ಓ ಪ್ರವಾದಿಯವರೇ, ತಮ್ಮ ಪತ್ನಿಯರೊಂದಿಗೆ, ಪುತ್ರಿಯರೊಂದಿಗೆ ಮತ್ತು ವಿಶ್ವಾಸಿನಿಯರಾದ ಮಹಿಳೆಯರೊಂದಿಗೆ, (ಅವರ ಹೊರಹೋಗುವಾಗ ಅಥವಾ ಅನ್ಯ ಪುರುಷರ ಮಧ್ಯೆಯಿರುವಾಗ) ಅವರು ತಮ್ಮ ಹೊರ ಉಡುಪನ್ನು ತಮ್ಮ ಮೇಲೆ ಹೊದ್ದುಕೊಳ್ಳುವಂತೆ ಹೇಳಿರಿ. ಅವರು (ಸುಶೀಲೆಯರೆಂದು) ಗುರುತಿಸಲ್ಪಡಲು ಮತ್ತು ಕಿರುಕುಳಕ್ಕೊಳಗಾಗದಿರಲು ಇದು ಅತ್ಯುತ್ತಮ ವಾಗಿದೆ."
> (ಕುರ್‌ಆನ್ 33:59)

ತಮ್ಮ ಸುಶೀಲತೆಯನ್ನು ಕಾಪಾಡುತ್ತಾ ಸಮಾಜದ ಸಕ್ರಿಯ ಸದಸ್ಯರಾಗುವ ಸ್ವಾತಂತ್ರ್ಯವನ್ನು ಹಿಜಾಬ್ ಮಹಿಳೆಯರಿಗೆ ನೀಡುತ್ತದೆ. ಹಿಜಾಬ್ ಪಾಲಿಸಬೇಕಾದುದು ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ. ಒಬ್ಬ ಮಹಿಳೆ ತಮ್ಮ ಕುಟುಂಬದೊಂದಿಗೆ ಮನೆಯೊಳಗಿರುವಾಗ ಹಿಜಾಬ್ ಪಾಲಿಸಬೇಕಾಗಿಲ್ಲ!

ಹಿಜಾಬ್ ಅದುಮುವಿಕೆಯನ್ನೋ, ದಬ್ಬಾಳಿಕೆಯನ್ನೋ, ಮೌನವನ್ನೋ ಪ್ರತಿನಿಧಿಸುವುದಿಲ್ಲ. ಬದಲಾಗಿ ಅದು ಮಹಿಳೆಯನ್ನು ವಕ್ರ ನೋಟಗಳಿಂದ, ಅನಗತ್ಯ ಬೆಳವಣಿಗೆಗಳಿಂದ ಮತ್ತು ನ್ಯಾಯರಹಿತ ಬೇಧಭಾವಗಳಿಂದ ರಕ್ಷಿಸುವ ಗುರಾಣಿಯಾಗಿದೆ. ಇಸ್ಲಾಮಿಗೆ ಮತಾಂತರಗೊಳ್ಳುವವರ ಪೈಕಿ 75% ಮಹಿಳೆಯರೇ ಆಗಿದ್ದಾರೆ! ನಿಮ್ಮ ಮೇಲೆ ದಬ್ಬಾಳಿಕೆ ಮಾಡುವ ಒಂದು ಧರ್ಮವನ್ನು ನೀವು ಪ್ರವೇಶಿಸುವಿರಾ? ಆದ್ದರಿಂದ ಮುಂದಿನ ಬಾರಿ ನೀವು ಒಬ್ಬ ಮುಸ್ಲಿಮ್ ಮಹಿಳೆಯನ್ನು ಕಂಡರೆ ಆಕೆ ಮರೆಮಾಚಿರುವುದು ಆಕೆಯ ಬಾಹ್ಯ ರೂಪವನ್ನೇ ಹೊರತು ಮನಸ್ಸನ್ನೋ ಬುದ್ಧಿಶಕ್ತಿಯನ್ನೋ ಅಲ್ಲವೆಂಬುದನ್ನು ಅರಿತುಕೊಳ್ಳಿರಿ!

## "ಇಸ್ಲಾಮ್ ಮಹಿಳೆಯರ ಮೇಲೆ ದಬ್ಬಾಳಿಕೆ ಮಾಡುತ್ತದೆ"

ತಪ್ಪುಕಲ್ಪನೆ # 2

ಅತ್ಯಂತ ಹೇಯವಾದ ತಪ್ಪುಕಲ್ಪನೆಗಳ ಪೈಕಿ ಒಂದು ಮುಸ್ಲಿಮ್ ಮಹಿಳೆಯರ ನೇತ್ಯಾತ್ಮಕವಾದ ಚಿತ್ರಣ. ಅಂದರೆ ಇಸ್ಲಾಮ್ ಮಹಿಳೆಯರನ್ನು ಕೀಳಾಗಿ ಕಾಣುತ್ತದೆ ಮತ್ತು ಅವರ ಮೇಲೆ ದಬ್ಬಾಳಿಕೆ ಮಾಡುತ್ತದೆ ಎಂಬ ಚಿತ್ರಣ. ಇಸ್ಲಾಮೀ ಬೋಧನೆಗಳ ಪ್ರಕಾರ, ದೇವನ ದೃಷ್ಟಿಯಲ್ಲಿ ಮನುಷ್ಯರನ್ನು ಪ್ರತ್ಯೇಕಿಸುವ ಒಂದೇ ಒಂದು ಮಾನದಂಡ ದೇವಭಕ್ತಿ ಮಾತ್ರ.

> "ಖಂಡಿತವಾಗಿಯೂ ನಿಮ್ಮಲ್ಲಿ ಅತ್ಯಂತ ಗೌರವಾನ್ವಿತರು ನಿಮ್ಮಲ್ಲಿ ಅತ್ಯಧಿಕ ದೇವಭಕ್ತಿಯುಳ್ಳವರು."
> (ಕುರ್‌ಆನ್ 49:13)

ನಿಜವಾದ ಗೌರವ ಮತ್ತು ಸ್ಥಾನವು ಲಭ್ಯವಾಗುವುದು ಒಬ್ಬ ವ್ಯಕ್ತಿ ಸಿರಿವಂತನೋ ಬಡವನೋ ಆಗಿರುವುದರಿಂದಲ್ಲ, ಕರಿಯನೋ ಬಿಳಿಯನೋ ಆಗಿರುವುದರಿಂದಲ್ಲ, ಗಂಡೋ ಹೆಣ್ಣೋ ಆಗಿರುವುದರಿಂದಲ್ಲ. ಬದಲಾಗಿ ನಿಜವಾದ ಗೌರವ ಮತ್ತು ಸ್ಥಾನವು ಲಭ್ಯವಾಗುವುದು ದೇವಭಕ್ತಿ ಮತ್ತು ತ್ಯಾಗ ಮನೋಭಾವದಿಂದ. ಆದ್ದರಿಂದ, ಒಬ್ಬ ಪುರುಷನು ಇಸ್ಲಾಮಿಗೆ ಮತಾಂತರಗೊಳ್ಳುವಾಗ ಅತ್ತ ನಾಲ್ಕು ಮಹಿಳೆಯರು ಇಸ್ಲಾಮಿಗೆ ಮತಾಂತರಗೊಳ್ಳುತ್ತಿದ್ದಾರೆ ಎಂಬುದು ಅಚ್ಚರಿದಾಯಕ ವಿಷಯವಲ್ಲ. ಈ ಅಗಾಧ ಪ್ರಮಾಣದ ಮಹಿಳಾ ಮತಾಂತರಕ್ಕಿರುವ ಕೆಲವು ಕಾರಣಗಳು ಇಸ್ಲಾಮ್ ಅವರಿಗೆ ನೀಡಿರುವ ಹಕ್ಕುಗಳು:

- ಅವರ ಆಸ್ತಿಯ ಮೇಲೆ ಅವರಿಗೆ ಸಂಪೂರ್ಣ ನಿಯಂತ್ರಣದ ಹಕ್ಕು;
- ಸಂಗಾತಿಯನ್ನು ಆರಿಸುವ ಹಕ್ಕು;
- ವಿವಾಹವಾದ ಬಳಿಕವೂ ತಮ್ಮ ಮನೆತನದ ಹೆಸರನ್ನು ಉಳಿಸಿಕೊಳ್ಳುವ ಹಕ್ಕು;
- ಆಸ್ತಿಯನ್ನು ಹೊಂದುವ, ವ್ಯವಹಾರ ಮಾಡುವ, ವಿದ್ಯಾಭ್ಯಾಸ ಮಾಡುವ ಮತ್ತು ಸಮಾನ ಉದ್ಯೋಗಕ್ಕೆ ಸಮಾನ ವೇತನವನ್ನು ಪಡೆಯುವ ಹಕ್ಕು;
- ಉತ್ತರಾಧಿಕಾರದ ಆಸ್ತಿ ಪಡೆಯುವ, ಪತಿಯಿಂದ ತಿರಸ್ಕಾರ ಅಥವಾ ದುರ್ವರ್ತನೆ ಯುಂಟಾದರೆ ವಿವಾಹವನ್ನು ಬರಖಾಸ್ತು ಮಾಡುವ ಹಕ್ಕು;
- ಪುರುಷರು ಭಾಗಿಯಾಗುವ ಎಲ್ಲ ಆರಾಧನಾ ಕರ್ಮಗಳಲ್ಲೂ ಭಾಗಿಯಾಗುವ ಹಕ್ಕು.

ಇಸ್ಲಾಮ್ ಮಹಿಳೆಯರಿಗೆ ಈ ಹಕ್ಕುಗಳನ್ನು ಇನ್ನಿತರ ಅನೇಕ ಹಕ್ಕುಗಳೊಂದಿಗೆ 1400 ವರ್ಷಗಳ ಹಿಂದೆಯೇ ಅಂದರೆ ಪಾಶ್ಚಾತ್ಯ ಮಹಿಳೆಯರಿಗೆ ಯಾವುದೇ ಹಕ್ಕುಗಳಿಲ್ಲದಿದ್ದ ಕಾಲದಲ್ಲೇ ನೀಡಿದೆ.

> "ಗಂಡಾಗಲಿ, ಹೆಣ್ಣಾಗಲಿ, ಯಾರು ವಿಶ್ವಾಸಿಯಾಗಿರುತ್ತಾ ಸತ್ಕರ್ಮವನ್ನು ಮಾಡುತ್ತಾರೋ ಖಂಡಿತವಾಗಿಯೂ ನಾವು ಅವರಿಗೆ ಅತ್ಯುತ್ತಮವಾದ ಬದುಕನ್ನು ಕರುಣಿಸುವೆವು ಮತ್ತು ಅವರು ಮಾಡಿಕೊಂಡಿರುವ ಅತ್ಯುತ್ತಮವಾದ ಕರ್ಮಕ್ಕೆ ಅನುಗುಣವಾಗಿ (ಪರಲೋಕದಲ್ಲಿ) ಅವರಿಗೆ ಪ್ರತಿಫಲವನ್ನು ದಯಪಾಲಿಸುವೆವು."
> (ಕುರ್‌ಆನ್ 16:97)

ಅನೇಕ ಮುಸ್ಲಿಮ್ ಮಹಿಳೆಯರು ದಬ್ಬಾಳಿಕೆಗೆ ಒಳಗಾಗುತ್ತಿದ್ದಾರೆ ಮತ್ತು ಅವರಿಗೆ ಅವರ ಹಕ್ಕುಗಳನ್ನು ನೀಡಲಾಗುತ್ತಿಲ್ಲ ಎಂಬುದು ನಿಜ. ಆದರೆ ಅದು ಇಸ್ಲಾಮಿನ ತಪ್ಪಲ್ಲ. ವಾಸ್ತವವಾಗಿ ಜಗತ್ತಿನ ಅನೇಕ ಭಾಗಗಳಲ್ಲಿ ಸ್ಥಳೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳು ಅಜ್ಞಾನದ ಮೂಲಕವೋ ಅಥವಾ ಹಾನಿಕರ ಸಾಂಸ್ಕೃತಿಕ ಸಂಪ್ರದಾಯಗಳ ಮೂಲಕವೋ ಇಸ್ಲಾಮೀ ಬೋಧನೆಗಳನ್ನು ನಿಸ್ತೇಜಗೊಳಿಸಿವೆ.

ಇಸ್ಲಾಮ್ ಮಹಿಳೆಯರಿಗೆ ಅವರ ಹಕ್ಕುಗಳನ್ನು ನೀಡುತ್ತದೆಯಾದರೂ ಅದರೊಂದಿಗೆ ಅವರು ಪುರುಷರಿಗೆ ಸಮಾನರಲ್ಲ ಎಂಬ ವಾಸ್ತವವನ್ನೂ ಅಂಗೀಕರಿಸುತ್ತದೆ.

> ಅಲ್ಲಾಹು ಹೇಳುತ್ತಾನೆ: "...ಮತ್ತು ಗಂಡು ಹೆಣ್ಣಿನಂತಲ್ಲ..."
> ಕುರ್‌ಆನ್ 3:36

ಆದ್ದರಿಂದ ಈ ಅವಿತರ್ಕ ವಾಸ್ತವವನ್ನು ಪ್ರತಿಬಿಂಬಿಸುತ್ತಾ ಇಸ್ಲಾಮ್ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಪಾತ್ರಗಳನ್ನು ವಹಿಸಿಕೊಟ್ಟಿದೆ. ಮಹಿಳೆಯರಿಗೆ ಕುಟುಂಬ ಮತ್ತು ಮನೆಮಂದಿಯ ಆರೈಕೆ ಮಾಡುವ ಗೌರವ ಹಾಗೂ ಮಹತ್ತರವಾದ ಹೊಣೆಗಾರಿಕೆಯನ್ನು ವಹಿಸಿಕೊಟ್ಟಿದೆ. ಪುರುಷರಿಗೆ ಕುಟುಂಬ ಹಾಗೂ ಮನೆಮಂದಿಗೆ ಆರ್ಥಿಕ ಆಧಾರ, ಸುರಕ್ಷಿತತೆ ಮತ್ತು ಜೀವನಾಧಾರವನ್ನು ಒದಗಿಸುವ ಹೊಣೆಗಾರಿಕೆಯನ್ನು ವಹಿಸಿಕೊಟ್ಟಿದೆ.

ಒಟ್ಟಿನಲ್ಲಿ, ಇಸ್ಲಾಮಿನಲ್ಲಿ ಮಹಿಳೆಗಿರುವ ಉದಾತ್ತ ಸ್ಥಾನಮಾನವನ್ನು ಈ ಕೆಳಗಿನ ಪ್ರವಾದಿ ಮುಹಮ್ಮದ್(ಸ)ರವರ ವಚನದ ಮೂಲಕ ಸಂಕ್ಷೇಪಿಸಬಹುದಾಗಿದೆ.

"ಇಹಲೋಕ ಮತ್ತು ಇಹಲೋಕದಲ್ಲಿರುವ ಎಲ್ಲ ವಸ್ತುಗಳೂ ಅಮೂಲ್ಯ. ಆದರೆ ಇಹಲೋಕದ ಅತ್ಯಮೂಲ್ಯ ವಸ್ತು ಸದ್ಗುಣವಂತೆ ಮಹಿಳೆ."